ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 74/2023**

ಪ್ರ.ವ.ಬೋ.ತಾಃ 23-04-2026

ಚಾಸಾಃ 8 ಫ್ರಾಸಾಃ 8

| | |
|---|---|
| ಸಾಕ್ಷಿಯ ಹೆಸರು | ಶಿವಗಂಗಯ್ಯ.ಹೆಚ್.ಎನ್. |
| ತಂದೆ/ಗಂಡನ ಹೆಸರು | ನರಸಿಂಹಯ್ಯ |
| ವಯಸ್ಸು | 49 ವರ್ಷ |
| ವೃತ್ತಿ | ಬೆರಳಚ್ಚುಗಾರರು, ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾವಗಡ ತಾ. |
| ವಾಸ | ಮಧುಗಿರಿ ಟೌನ್, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಚಾಸಾ.4 ಮತ್ತು 5 ರವರು ಗೊತ್ತು. ನಾನು 2005 ರಿಂದ 2010 ರವರೆಗೆ ಬ್ಯಾಲ್ಯ ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದೆನು. ನಮ್ಮ ಗ್ರಾಮ ಪಂಚಾಯಿತಿವತಿಯಿಂದ 2009 ನೇ ಸಾಲಿನಲ್ಲಿ ಚಾಸಾ.5 ರವರಿಗೆ ಸರ್ಕಾರಿ ಗ್ರಾಮ ಠಾಣಾ ವ್ಯಾಪ್ತಿಯಿಂದ ಒಂದು ನಿವೇಶನವನ್ನು ಮಂಜೂರು ಮಾಡಲಾಗಿತ್ತು. ಆನಂತರ ಚಾಸಾ.5 ರವರು ಗ್ರಾಮ ಪಂಚಾಯಿತಿವತಿಯಿಂದ ಒಂದು ಮನೆ ಕಟ್ಟಿಸಿಕೊಡುವಂತೆ ಅರ್ಜಿ ಸಲ್ಲಿಸಿದ್ದು, ಅದರಂತೆ ಆಶ್ರಯ ಯೋಜನೆಯಡಿ ಒಂದು ಮನೆಯನ್ನು ಕಟ್ಟಿಕೊಳ್ಳಲು ಮಂಜೂರು ಮಾಡಲಾಗಿತ್ತು. ಮನೆ ಕಟ್ಟಿಕೊಳ್ಳಲು ಒಟ್ಟು ನಾಲ್ಕು ಕಂತಿನಲ್ಲಿ ಹಣ ಬಿಡುಗಡೆ

ಮಾಡಲಾಗಿತ್ತು. ಆದರೆ ಎಷ್ಟು ಹಣ ಮಂಜೂರಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಚಾಸಾ.4 ರವರು ನಮ್ಮ ಗ್ರಾಮ ಪಂಚಾಯಿತಿಯಲ್ಲಿ ವಾಟರ್ ಮನ್ ಆಗಿ ಕೆಲಸ ಮಾಡುತ್ತಿದ್ದು, ಆನಂತರ ಅವರು ಬಿಲ್ ಕಲೆಕ್ಟರ್ ಆಗಿ ಪದೋನ್ನತಿ ಹೊಂದಿದರು.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ– ಮಾನ್ಯ ಸ.ಸ.ಅ. ರವರಿಂದಃ–**

ಚಾಸಾ.5 ರವರು 2001–02 ನೇ ಸಾಲಿನಲ್ಲಿ ಲಿಡ್ಕರ್ ವಸತಿ ಯೋಜನೆಯಡಿಯಲ್ಲಿ ಹಂದ್ರಾಳು ಯೋಜನೆಯಡಿ ಮನೆ ಕಟ್ಟಿಕೊಳ್ಳಲು ರೂ.10,000/– ಹಣವನ್ನು ಬ್ಯಾಲ್ಯ ಗ್ರಾಮ ಪಂಚಾಯಿತಿಯಿಂದ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಮನೆ ಮಳೆಯಿಂದ ಬಿದ್ದು ಹೋಗಿತ್ತು ಎಂದರೆ ಸರಿ. 2013–14 ನೇ ಸಾಲಿನಲ್ಲಿ ಇಂದಿರಾ ಆವಾಜ್ ಯೋಜನೆಯಡಿ ಚಾಸಾ.5 ರವರು ಮನೆ ಕಟ್ಟಿಕೊಳ್ಳಲು ಒಟ್ಟು ರೂ.1,19,800/– ಹಣ ಸರ್ಕಾರದಿಂದ ಪಡೆದುಕೊಂಡಿದ್ದರು ಎಂದರೆ ಸರಿ.

**ಪಾಟೀ ಸವಾಲುಃ– 2 ನೇ ಆರೋಪಿಯ ಪರವಾಗಿ ಶ್ರೀ. ಆರ್.ಆರ್. ವಕೀಲರಿಂದಃ–**

ಆ ಅವಧಿಯಲ್ಲಿ ಯಾರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾಗಿದ್ದರು ಎಂಬುದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ 1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಕೋರಿರುತ್ತಾರೆ.

ಮರು ವಿಚಾರಣೆಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ